Mr. SPEAKER.—The question is disallowed.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಆಹಾರದ ಪರಿಸ್ಥಿತಿ ಕಷ್ಟ ಇರುವಾಗ ನಿಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದಿದೆ, ಹೀಗಿರುವಾಗ ತಾವು ನಿಣ್ಣ ನೀರಾವರಿ ಯೋಜನೆಗ ಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ, ಕೇಂದ್ರ ಸರ್ಕಾರದವರು ಈ ಬಾಬಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ, ಅವರು ಎಷ್ಟು ಹಣವನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ?

ಶ್ರೀ ಆಲೂರು ಹನುಮಂತಪ್ಪ.—ಈ ವರ್ಷ ನಾವು ನಿಣ್ಣ ನೀರಾವರಿಗೆ ಸಂಬಂಧಪಟ್ಟ ಹಾಗೆ ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖಾಂತರ 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಕೇಂದ್ರ ಸರ್ಕಾರದಿಂದ ನಮಗೆ ಮೂರು ಕೋಟಿ ಎಪ್ಪತ್ತೈದು ಲಕ್ಷ ರೂಪಾಯಿಗಳು ಬಂದಿದೆ.

ಶ್ರೀ ಎನ್. ನಂಜೇಗೌಡ —ಮೈನರ್ ಇರಿಗೇಷನ್ನಿಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತೇವೆಂದು ಆಗಾಗ್ಗೆ ಭಾಷಣವನ್ನು ಮಾಡುತ್ತಿರುತ್ತೀರಿ, ಆದರೆ ಆ ರೀತಿ ಆದಕ್ಕೆ ಪ್ರಾಶಸ್ತ್ಯವನ್ನು ಕೊಡದೆ ಆ ಕೆಲಸ ಫೆಲ್ಯೂರ್ ಆಗಿದೆ ಎಂದು ಹೇಳಿದರೆ ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಹಾಗೆ ಹೇಳುವುದಕ್ಕಾಗುವುದಿಲ್ಲ. ಮೈನರ್ ಇರಿಗೇಷನ್ನಿನಲ್ಲಿ ನಾವು ಅಧಿಕ ಕೆಲಸವನ್ನು ಮಾಡಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇದುವರೆಗೂ ಮಾನ್ಯ ಉಪಮಂತ್ರಿಗಳು ಹೇಳಿದ್ದನ್ನೂ ನೋಡಿದರೆ ಹಣವೂ ಇಲ್ಲ ಕೆಲಸವೂ ಇಲ್ಲ ಎಂದು ಅರ್ಥವಾಯಿತು, ಹಾಗಿದ್ದಮೇಲೆ ಈ ಮೈನರ್ ಇರಿಗೇಷನ್ನಿಗೆ ಒಬ್ಬರು ಉಪಮಂತ್ರಿಗಳು ಬೇಕೆ ?

Mr. SPEAKER.—That is why I do not allow this Hon'ble Member to put questions.

Location of a Steel Plant at Hospet.

*Q.—333. Sri GANJI VEERAPPA (Harihar).—

Will the Government be pleased to state :—

(*a*) whether the Government of India have sent their team of Anglo-American experts to study and report on the question of Location of the Steel Plant at Hospet ;

(*b*) whether an earlier team of Government of India experts had reported that Hospet is the best suited place for the Location of the Steel Factory when compared to other places that are competing ;

(*c*) whether the State Government have decided to put up a Steel Plant at Hospet ?

A.—Sri K. MALLAPPA (Minister for Industries and Commerce).—

(*a*) No.
(*b*) No official report in this regard has been received.
(*c*) The question is under examination.

Sri GANJI VEERAPPA.—May I know whether the Government are aware that the Union Minister for Steel, Sri N. Sanjeeva Reddy, made a statement on the floor of the Lok Sabha that the technical opinion in regard to establishment of steel plant is in favour of Hospet ?

Sri K. MALLAPPA.—Hospet and Goa are tied up. There is no indication between the two which is going to be a better site. From the unofficial information that is available with me, it looks as though Hospet has got superiority over Goa.

Sri G. V. GOWDA.—May I know whether the Government of India has obtained any report from technical experts or whether they have entrusted the matter to any experts ?

Sri K. MALLAPPA.—The Dastur Co. has already submitted a feasibility report.

Sri GANJI VEERAPPA.—May I know whether the Dastur Company is in favour of locating a steel plant at Hospet ?

Sri K. MALLAPPA.—The feasibility report has already been given by the Dastur Company. It is in favour of establishing a Steel Plant at Hospet.

Sri H. R. KESHAVA MURTHY.—Are you not aware during the recent tour of our Prime Minister, Sri Lal Bahadur Sastry, a question was put to him about the location of this Steel Plant, and he did not give any definite answer. But he allowed us to guess it ourselves.

9-00 A.M.

Sri K. MALLAPPA.—There are two reports Feasibility report in favour of Bialdela, feasibility report in favour of Hospet and Goa and there is also a separate report from Madras about Salem. These 3 have to be examined by the Expert Committee and the Expert Committee will give their final decision and then the Government of India will be able to decide.

ಶ್ರೀ ಎಸ್. ಎಂ. ಕೃಷ್ಣ.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ಈಗ ಕೆಲವು ದಿವಸಗಳ ಕೆಳಗೆ ಸೇಲಂ, ಹೊಸಪೇಟೆ ಮತ್ತು ಇನ್ನೊಂದು ಕಡೆ, ಮೂರು ಕಡೆಗಳಲ್ಲಿಯೂ ಒಂದೊಂದು ಉಕ್ಕಿನ ಕಾರ್ಖಾನೆಯನ್ನು ಮಾಡೋಣವೆಂದ ಹೇಳಿದರು. ಒಂದು ಉಕ್ಕಿನ ಕಾರ್ಖಾನೆ ಮಾಡತಕ್ಕಂಥಾವ್ದೇ ಬಹಳ ಕಷ್ಟಸಾಧ್ಯವಾದ ಕೆಲಸ. ಅಂಥಾದ್ದರಲ್ಲಿ, ಹೊಸಪೇಟೆಯಲ್ಲಿ ಎಲ್ಲಾ ವಿಧದಲ್ಲಿಯೂ ಕೂಡ ಉಕ್ಕಿನ ಕಾರ್ಖಾನೆಯಾಗುವುದಕ್ಕೆ ಹೆಚ್ಚಿನ ಸಾಧ್ಯತೆ ಇದೆ. ಅನುಕೂಲತೆ ಇರಬಹುದೆಂದು ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರಿ, ಒತ್ತಾಯ ತರುವುದು ಬಿಟ್ಟು, ಎಲ್ಲಾ ಕಡೆಗೂ ಕೊಡಿ ಅಂತ ಹೇಳಿದರೆ, ಸರ್ಕಾರದವರಿಗೆ ಈ ವಿಚಾರದಲ್ಲಿ ಸಾಕಾದಷ್ಟು ಸೀರಿಯಸ್‌ನೆಸ್ ಇಲ್ಲವೆಂತ ಅರ್ಥವಾಗುವುದಿಲ್ಲವೆ ?

ಶ್ರೀ ಕೆ. ಮಲ್ಲಪ್ಪ.—ಹಾಗೆ ಅರ್ಥವಾಗುವುದಿಲ್ಲ. ಮದ್ರಾಸ್, ಮೈಸೂರು ಮತ್ತು ಆಂಧ್ರ ಈ ಮೂರು ಸ್ಟೇಟುಗಳೂ ಕೇಂದ್ರ ಸರ್ಕಾರದಮೇಲೆ ಒತ್ತಾಯ ಮಾಡುತ್ತಿರುತ್ತಾರೆ. ಆಯಾ ಸ್ಟೇಟಿನಲ್ಲಿ ಒಂದೊಂದು ಸ್ಟೀಲ್ ಫ್ಯಾಕ್ಟರಿಯಾಗಬೇಕೆಂದು. ಆ ರೀತಿ ಅವರು ಹೇಳಿದ್ದು, ಎಲ್ಲರೂ ಒಂದು ರಾಜಿಗೆ ಬರಬೇಕು, ಎಲ್ಲರಿಗೂ ಉಪಕಾರವಾಗಬೇಕು. ಸಮಾಧಾನವಾಗಬೇಕು ಎಂಬ ಅಪೇಕ್ಷೆ ಎಂದು ನಮ್ಮ ಚೀಫ್ ಮಿನಿಸ್ಟರು ಮೂರು ಸ್ಟೇಟುಗಳಲ್ಲಿ ಕೂಡ 5 ಮಿಲಿಯನ್ ಟನ ಮೂರು ಸಣ್ಣ ಸ್ಟೀಲು ಪ್ಲಾಂಟುಗಳಾಗಲಿ ಎಂದು ಮಾತ್ರ ಹೇಳಿದ್ದಾರೆ. ನಮ್ಮ ಕೇಸು ಪ್ರತ್ಯೇಕವಾಗಿದೆ, ಅದು ಮೆರಿಟ್ಟಿನ ಮೇಲೆ integreated plant ಸಿದ್ಧವಾಗಬೇಕು. ನಮಗೆ 1½ ಮಿಲಿಯನ್ ಟನ್ ಸ್ಟೀಲ್ ಪ್ಲಾಂಟ್ ಆಗಬೇಕು ಅನ್ನುವ ಅಭಿಪ್ರಾಯವಿದೆ. ಅದನ್ನು ತಜ್ಞರು ವಿಚಾರ ಮಾಡುತ್ತಿದ್ದಾರೆ. ವಿವಿಧ ಭಾಗದ ಮಂತ್ರಿಗಳು ಖಾನಗಿಯಾಗಿ ಅಭಿಪ್ರಾಯ ಕೊಟ್ಟಿದ್ದಾರೆ. ಆದರೆ ನಮ್ಮ ಕೇಸು ಏನಾದರೂ ಸಡಿಲವಾಗಿದೆ ಅನ್ನುವುದಕ್ಕೆ ಆಧಾರವಿಲ್ಲ.

Sri G. V. GOWDA—Is it not the opinion of the Dastur Company an expert opinion, if so, what is the reaction by the Government of India and is there any need for another Committee to give opinion ?

ಶ್ರೀ ಕೆ. ಮಲ್ಲಪ್ಪ.—ವೆಂಕಟೇಗೌಡರು ಅರ್ಥವಾಡಿಕೊಂಡಿಲ್ಲ. ದನ್ದೂರ್ ಕಂಪೆನಿಯವರು ಇಲ್ಲಿಯೂ ಕೊಟ್ಟರೆ ಆಗಬಹುದು ಅಂತ ಹೇಳಿದ್ದಾರೆ. ಬಾಲ್ಡಿಬ್ಯಾದಲ್ಲಿ ಕೊಟ್ಟರೂ ಆಗಬಹುದು; ಮದ್ರಾಸಿನಲ್ಲಿಯೂ ಆಗಬಹುದೆಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಮೂರು ರಿಪೋರ್ಟುಗಳನ್ನೂ ಪರಿಶೋಧನೆ ಮಾಡಬೇಕು. Which will be the cheapest, which will be the most advantageous ಅನ್ನುವುದನ್ನು ಪರಿಶೀಲನೆ ಮಾಡಬೇಕು.

Sri GANJI VEERAPPA.—Is it not true that the Mysore ore is the richest in purety and is in large store in Hospet area?

Sri K. MALLAPPA.—It is an indisputable fact that Sandur ore is very high in grade and its deposit is considerably high. It is estimated to be ten thousand tons of high grade ore.

ಶ್ರೀ ಸಿದ್ದಯ್ಯ ಕಾಶಿಮಠ.—ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪಿಸಬೇಕೆಂದು ಹೇಳಿ, ಯಾವ ಯಾವ ಅನುಕೂಲತೆಗಳು ಸಿಗುತ್ತವೆಂದು ಹೇಳಿ ಕೇಂದ್ರ ಸರ್ಕಾರಕ್ಕೆ ರೆಪ್ರೆಸೆಂಟೇಶನ್ ಮಾಡಿದ್ದೀರಿ?

ಶ್ರೀ ಕೆ. ಮಲ್ಲಪ್ಪ.—ರೆಪ್ರೆಸೆಂಟೇಶನ್ ಕೂಡ ಮಾಡಿದ್ದೇವೆ ಮತ್ತು ನಾವು ಕೂಡ ಒಂದು Expert Committee, appoint ಮಾಡಿದ್ದೇವೆ. ಅವರು ಹೊಸಪೇಟೆಯಲ್ಲಿ ಏನೇನು ಸಲಕರಣೆಗಳು ಸಿಗುತ್ತವೆ ಎಂದು ಸಂಗ್ರಹಿಸಿ, ರಿಪೋರ್ಟು ತಯಾರು ಮಾಡಿದ್ದಾರೆ. ಇನ್ನು ಸ್ಥಳ ಪರಿಶೀಲನೆಗಾಗಿ ಆಂಗ್ಲೋ-ಅಮೇರಿಕನ್ ಕಾನ್‌ಸೋರ್ಟಿಯಂ ಟೀಮ್ ಬಂದ ಸಮಯದಲ್ಲಿ, ಈ ವಿಷಯುಗಳನ್ನೆಲ್ಲಾ ಅವರ ಮುಂದೆ ಇಡುತ್ತೇವೆ. ನಮ್ಮ Expert Committee Report ರೆಡಿಯಾಗಿದೆ. ಅದನ್ನು ಪ್ರಿಂಟ್ ಮಾಡಿಸಿ ಸದಸ್ಯರೆಲ್ಲರಿಗೂ ಕೊಡುತ್ತೇವೆ.

ಶ್ರೀ ಸಂಜೀವನಾಥ ಐಕಳ.—ಮದ್ರಾಸು ಸರ್ಕಾರದವರು ಈಗಾಗಲೇ ಸೇಲಂ ಪ್ರದೇಶದಲ್ಲಿ 13 ಸಾವಿರ ಎಕರೆ ಜಮೀನು ತೆಗೆದುಕೊಂಡು, preliminary work ಶುರು ಮಾಡಿದ್ದಾರೆ, ಮತ್ತು ಕೇಂದ್ರಕ್ಕೆ ಮತ್ತು ಕಾನ್‌ಸೋರ್ಟಿಯಮ್ಮಿಗೆ, ಅಲ್ಲಿ ಸಿಗುವುದು ಬಹಳ ಒಳ್ಳೆಯ ಓರು, highest in purity, largest in quantity ಎಂದು ರಿಪೋರ್ಟ್ ಕಳಿಸಿದ್ದಾರೆ ಎಂದು ಪ್ರಚಾರ ಮಾಡುತ್ತಿರುವುದು ತಮಗೆ ಗೊತ್ತಿದೆಯೇ?

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಸದಸ್ಯರಿಗೆ ಈ ಅಭಿಪ್ರಾಯ ಎಲ್ಲಿಂದ ಬಂದಿತೋ ಗೊತ್ತಿಲ್ಲ. ಅವರದು largest ಎಂದು ಹೇಳುವುದಕ್ಕೆ ಬರುವುದಿಲ್ಲ, ಅವರು ಹೇಳುವುದೂ ಇಲ್ಲ. ಅವರದು, richest ore ಅಂತ ಕೂಡ ಅವರು ಹೇಳಲಿಲ್ಲ, ಯಾವ ರಿಪೋರ್ಟಿನಲ್ಲಿಯೂ ಮದ್ರಾಸ್ ಸರ್ಕಾರದವರು ಹಾಗೆ ಹೇಳಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಸ್ವಾಮಿ, ಕೇಂದ್ರ ಮಂತ್ರಿಮಂಡಲದಲ್ಲಿ, ಆಂಧ್ರ ರಾಜ್ಯದ ಪ್ರತಿನಿಧಿಗಳೂ ಮದ್ರಾಸು ರಾಜ್ಯದ ಪ್ರತಿನಿಧಿಗಳೂ ಇದ್ದಾರೆ. ಆದ್ದರಿಂದ ಆಂಧ್ರ ಮತ್ತು ಮದ್ರಾಸು ರಾಜ್ಯಗಳ ಕಕ್ಕನ್ನು (claims) ಕೇಂದ್ರ ಸರಕಾರದ ಮೇಲೆ ಪ್ರಭಾವ ಶಾಲಿಯಾಗಿ, ಒತ್ತಾಯ ಮೂಲಕವಾಗಿ ಕರುವುದಕ್ಕೆ ಅವರಿಗೆ ಅವಕಾಶವಿದೆ. ಆದರೆ ಮೈಸೂರಿಗೆ ಆ ಅವಕಾಶವಿಲ್ಲದಿರುವುದರಿಂದ, ಒಂದುವೇಳೆ ಕೇಂದ್ರ ಸರಕಾರ ರಾಜಕೀಯ ಪ್ರಭಾವಗಳಿಗೆ ಒಳಪಟ್ಟು ಮೈಸೂರಿಗೆ ಇಲ್ಲದಂತೆ ಮಾಡಿದರೆ, ಮೈಸೂರು ಸರ್ಕಾರದವರೂ ಈ ಕಾರ್ಖಾನೆಯನ್ನು ಸ್ಥಾಪಿಸಲು ಏನು ನಿಲುವನ್ನು ತೆಗೆದುಕೊಳ್ಳುತ್ತಾರೆ?

ಶ್ರೀ ಕೆ. ಮಲ್ಲಪ್ಪ.—ಇದು ಹೈಪಾತೆಟಿಕರ್ ಕೊಶ್ಚನ್. ಇದು ಯಾವ ಒಂದು ರಾಜಕೀಯದ ಒತ್ತಾಯದ ಮೇಲೆ ತೀರ್ಮಾನ ಮಾಡತಕ್ಕಂಥ ಪ್ರಶ್ನೆಯಲ್ಲ. ನೂರಾರು ಕೋಟಿಗಳನ್ನು ಇನ್‌ವೆಸ್ಟ್ ಮಾಡುವ ಕಾಲದಲ್ಲಿ ಉಪಯೋಗಿಸತಕ್ಕಂಥ ಕಾಲದಲ್ಲಿ, ಅದಷ್ಟು ಕಡಿಮೆ ಖರ್ಚಿನಲ್ಲಿ ಉಕ್ಕನ್ನು ತಯಾರು ಮಾಡಬೇಕಾಗುತ್ತದೆ, ರಾಷ್ಟ್ರೀಯ ದೃಷ್ಟಿಯನ್ನಿಟ್ಟುಕೊಂಡು ತೀರ್ಮಾನ ಮಾಡಬೇಕಾಗುತ್ತದೆ. ಈಗ ಸದ್ಯದಲ್ಲಿಯೇ ಆಂಗ್ಲೋ-ಅಮೇರಿಕನ್ ಕಾನ್‌ಸೋರ್ಟಿಯಂ ಒಂದು ಟೀಂ ಬರುತ್ತದೆ. ಅವರು ವಿಚಾರಸು ಮಾಡುವ ಕಾಲದಲ್ಲಿ, ನಲಹೆ ಕೊಡತಕ್ಕ ಕಾಲದಲ್ಲಿ, ಜವಾಬ್ದಾರಿಯುತವಾಗಿ ರೆಕಮೆಂಡ್ ಮಾಡುತ್ತಾರೆ. ಇದು ಯಾವುದಾದರೂ ರಾಜಕೀಯ ಒತ್ತಾಯಕ್ಕೆ ಒಳಪಟ್ಟು ತೀರ್ಮಾನ ಮಾಡತಕ್ಕ ಪ್ರಶ್ನೆಯಲ್ಲ ಇದು ಹಣ ವತ್ತು ಉತ್ಪಾದನೆಯ ಪ್ರಶ್ನೆ ಒಂದು ವೇಳೆ, ಇಂಡಿಯಾ ಸರಕಾರದವರು ಇಲ್ಲಿಯೇ ಸ್ಟೀಲ್ ಫ್ಯಾಕ್ಟರಿ ಕೊಡಲು ತೀರ್ಮಾನ ಮಾಡದೆ ಹೋದರೆ, ಅಥವ ಆ ತೀರ್ಮಾನ ಇತರ ಕಡೆ ಆಗಬೇಕು ಎಂದು ಆದರೆ, ಆ ಸಂದರ್ಭದಲ್ಲಿ ಇಲ್ಲಿಯೇ ಒಂದು ಸ್ಟೀಲ್ ಫ್ಯಾಕ್ಟರಿ ಸ್ಥಾಪನೆ ಮಾಡಬೇಕೆನ್ನುವುದು ನಮ್ಮ ಸರ್ಕಾರದ ತೀವ್ರ ಆಲೋಚನೆಯಲ್ಲಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಮಾನ್ಯ ಪ್ರಧಾನ ಮಂತ್ರಿಗಳು ಬೆಂಗಳೂರಿಗೆ ಸಾದರ್ಶನ ವಿತ್ತಾಗ ಹೊಸಪೇಟೆಯಲ್ಲಿ ದೊರೆಯುತಕ್ಕಂಥ ಅದುರು ಉತ್ಪತ್ತಿ ಮತ್ತು ಶ್ರೇಷ್ಠ ಅನ್ನುವುದನ್ನು ನಮ್ಮ ವಿಧಾನ ಸಭಾ ಪರಿಷತ್ತಿನ ಮಹಿಳಾ ಸದಸ್ಯರು ಅವರ ಲಕ್ಷ್ಯಕ್ಕೆ ತಂದ ಕಾಲದಲ್ಲಿ, ಪ್ರಧಾನ ಮಂತ್ರಿಗಳ ಪ್ರತಿಕ್ರಿಯೆ ಏನು ?

ಶ್ರೀ ಕೆ. ಮಲ್ಲಪ್ಪ.—ಮಹಿಳಾ ಸದಸ್ಯರಿಯರು ಅಲ್ಲೇ, ಹೊಸಪೇಟೆಯಲ್ಲಿಯೇ ಸ್ಟೀಲ್ ಪ್ಲಾಂಟ್ ಆಗಬೇಕು ಎಂದು ಹೇಳಿದ್ದಾರೆ. ಅದಕ್ಕೆ ಅವರು ಜವಾಬು ಕೊಟ್ಟದ್ದೂ ಕೇಳಿದ್ದೇನೆ. ಅವರು ತಜ್ಞರ ಅಭಿಪ್ರಾಯ ತಗೆದುಕೊಂಡು ತೀರ್ಮಾನ ಮಾಡುತ್ತೇವೆಂದು ಹೇಳಿದರು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಆಂಧ್ರದ ನಂಜೀವರೆಡ್ಡಿಯವರು.....

Mr. SPEAKER.—Members need not drag in names, should not insinuate others.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಆಂಧ್ರದ ಪ್ರಭಾವ ಶಾಲಿಯಾದಂಥ ಮಂತ್ರಿಗಳೂ, ಮತ್ತು ಆಲ್ ಇಂಡಿಯಾ ಕಾಂಗ್ರೆಸ್ ಪ್ರೆಸಿಡೆಂಟರೂ ಮತ್ತು ಮಾದ್ಯಾಸಿನವರೂ ಆಗಿರತಕ್ಕವರು, ಮೈಸೂರಿಗೆ ದೊರೆಯತಕ್ಕಂಥ ಸ್ಟೀಲ್ ಪ್ಲಾಂಟು ಬೇರೆ ಕಡೆಗೆ ಹೋಗುವಂತೆ ಕೇಂದ್ರದ ಮೇಲೆ ಪ್ರಭಾವ ಬೀರಿದರೆ, ನೀವೂ ಕೇಂದ್ರದ ಮೇಲೆ ಪ್ರಭಾವ ಬೀರುವುದಕ್ಕೆ ಪ್ರಯತ್ನ ಮಾಡುತ್ತೀರ ?

Mr. SPEAKER.—It is not necessary to answer. It has been answered.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕೆಲವು ದಿವಸಗಳ ಹಿಂದೆ ಮಾನ್ಯ ಮಂತ್ರಿಗಳು ಹೊಸಪೇಟೆಯಲ್ಲಿ ಈ ಕಾರ್ಖಾನೆಯನ್ನು ಸ್ಥಾಪನೆ ಮಾಡಿಯೇ ಮಾಡುತ್ತೇವೆಂದು ಹೇಳಿ, ಈಗ ತೀವ್ರ ಆಲೋಚನೆಯಲ್ಲಿದೆಯೆಂದು ಹೇಳುತ್ತಿದ್ದಾರೆ. ಈ ಉತ್ತರ ನೋಡಿದರೆ ಒಂದು ಮೆಟ್ಟಲು ಕೆಳಗೆ ಬಂದಹಾಗೆ ಕಾಣುತ್ತದೆ. ಮಾಡಿಯೇ ಮಾಡುತ್ತೇವೆಂಬ ನಿಲುವನ್ನು ಬಿಡಬೇಡಿ, ಸಭಾನದಸ್ಯರ, ಬೆಂಬಲ ಇದೆಯೆಂದು ಭರವಸೆ ಕೊಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಇದರ ಬಗ್ಗೆ ಈಗೇನೂ ಹೇಳುವಂತಿಲ್ಲ. ಇದರ ಬಗ್ಗೆ ವಿಚಾರ ಮಾಡುತ್ತಿದ್ದಾರೆ. ಈಗ ಅಂಗ್ಲೊ ಅಮೆರಿಕನ್ ಕನ್ಸರ್ಷಿಯಂ ಟೀಂ ಎನ್ನುವುದು ಬರುವುದರಲ್ಲಿದೆ, ಅವರೂ ಕೂಡ ಇಲ್ಲಿನ ಜಾಗವನ್ನು ಒಪ್ಪಿಕೊಳ್ಳುವುದರಲ್ಲಿ ಅನುಮಾನವಿಲ್ಲ. ಏಕೆಂದರೆ, ನಮ್ಮ ಕೇಸು ಬಹಳ ಸ್ಟ್ರಾಂಗ್ ಆಗಿದೆ. ಒಂದು ವೇಳೆ ಅವರು ಒಪ್ಪದೇ ಇದ್ದರೆ ಆಗ ನಾವು ಇದನ್ನು ಮಾಡಬೇಕಾಗುತ್ತದೆ. ಮತ್ತು ಇದಕ್ಕಾಗಿ ಸರಿಯಾದ ಹಣಕಾಸಿನ ವ್ಯವಸ್ಥೆಯನ್ನೂ ಮಾಡಬೇಕಾಗುತ್ತದೆ. ಇವನ್ನೆಲ್ಲಾ ತೀವ್ರವಾಗಿ ಆಲೋಚನೆ ಮಾಡಿ ಯಾವ ರೀತಿ ಇದನ್ನು ಮುಂದುವರಿಸಬೇಕು ಎನ್ನುವುದೂ ಇದೆ. ಇವೆಲ್ಲ ಮಾಡಬೇಕಾದರೆ ಇಂಡಿಯಾ ಸರಕಾರದವರು ಅವರ ತೀರ್ಮಾನವನ್ನು ತಗೆದುಕೊಂಡ ನಂತರ ನಾವು ಆಲೋಚನೆ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಎನ್. ಕೇಶವಮೂರ್ತಿ.—ಡೆವಲಪಿಂಗ್ ಎಕಾನಮಿಯಲ್ಲಿ ಇಂಡಸ್ಟ್ರಿಯಲ್ ಅಡ್ವಾನ್ಸ್‌ಮೆಂಟು ಕೂಡ ಬರುತ್ತದೆ. ಈಗ ಶರಾವತಿ ಎಲೆಕ್ಟ್ರಿಕ್ಸಿಟಿ ಪ್ರಾಜೆಕ್ಟು ಆಗಿರುವುದರಿಂದ ಇಲ್ಲಿ ಸ್ಟೀಲ್ ಪ್ಲಾಂಟನ್ನು ಮಾಡದೆ ಬೇರೆ ಕಡೆಗೆ ಕೊಟ್ಟರೆ ಹಾಗೂ ಈಗ ಬರುತ್ತಿರುವ ಅಂಗ್ಲೊ ಅಮೆರಿಕನ್ ಟೀಮಿನವರೂ ಒಪ್ಪದೇ ಹೋದರೆ ಸೋವಿಯಟ್ ಎಕ್ಸ್‌ಪರ್ಟುಗಳ ಸಹಾಯವನ್ನಾದರೂ ಪಡೆದು ಮಾಡುವುದು ಅಗತ್ಯವಲ್ಲವೇ ಎನ್ನುವುದನ್ನು ಸರಕಾರ ಯೋಚನೆ ಮಾಡುತ್ತದೆಯೇ ?

ಶ್ರೀ ಕೆ. ಮಲ್ಲಪ್ಪ.—ಇದು ಹೈಪೊಥಿಟಿಕಲ್ ಪ್ರಶ್ನೆಯಾಗಿದೆ. ಸೋವಿಯಟ್ ಎಕ್ಸ್‌ಪರ್ಟುಗಳು ಈಗಾಗಲೇ ಬೊಕಾರೋ ಸ್ಟೀಲ್ ಪ್ಲಾಂಟನ್ನು ಮಾಡುತ್ತಿದ್ದಾರೆ ಮತ್ತು ಅವರು ಇದಕ್ಕಾಗಿ ಸುಮಾರು 350 ಕೋಠಿಯಷ್ಟನ್ನು ಖರ್ಚು ಮಾಡುತ್ತಿದ್ದಾರೆ, ಇನ್ನು ಹೆಚ್ಚು ಅವರು ಮಾಡುವುದಕ್ಕಾಗುವುದಿಲ್ಲ. ಇನ್ನು ಕೆಲವು ತಿಂಗಳುಗಳಲ್ಲಿ ಅಂಗ್ಲೊ ಅಮೆರಿಕನ್ ಟೀಂ ಇಲ್ಲಿಗೆ ಬರುತ್ತದೆ ಅವರಿಗೆ ಕೇಂದ್ರ ಸರಕಾರದವರು ಮೂರು ಸ್ಥಳಗಳನ್ನೂ ಹೇಳಿದ್ದಾರೆ. ಅವರು ಮೂರು ಕಡೆಯೂ ಹೋಗಿ ನೋಡಿ ಬಂದ ಮೇಲೆ ಅವರ ವರದಿ ಕೊಡುತ್ತಾರೆ. ಅವರೇ ಇದಕ್ಕಾಗಿ ಇನ್‌ವೆಸ್ಟು ಮಾಡುವವರು. ಮೂರು ಜಾಗಗಳಲ್ಲಿಯೂ ಇನ್‌ವೆಸ್ಟು ಮಾಡುವುದಕ್ಕೆ ಸಾಧ್ಯವಿಲ್ಲ. ಯಾವಾಗಲೂ ಹಣವನ್ನು ಇನ್‌ವೆಸ್ಟು ಮಾಡುವವರು ಸುಮ್ಮನೆ ಯಾವುದನ್ನೂ ಪರೀಕ್ಷೆ ಮಾಡದೆ ಹಣ ಕೊಡುವುದಿಲ್ಲ. ಅವರಲ್ಲರುವ ತಜ್ಞರೆಲ್ಲ ಬಂದು ಪರಿಶೀಲನೆ ಮಾಡಿದ ನಂತರವೇ ಯಾವುದಾದರೂ ಯೋಜನೆಯನ್ನು ಮಾಡಲು ಹೋಗುವುದು.

Sri GANJI VEERAPPA.—This team of Anglo-American Consortium is a team of experts. When is it coming to Mysore ? Sir,

ಶ್ರೀ ಕೆ. ಮಲ್ಲಪ್ಪ.—ಅಂಗ್ಲೋ ಅಮೆರಿಕನ್ ಕನ್‌ಸೊರ್‌ಷಿಯಂ ಟೀಂನ ಎಕ್ಸ್‌ಪರ್ಟುಗಳು ಇನ್ನು ಎರಡು ಮೂರು ತಿಂಗಳಲ್ಲಿ ಬರಬೇಕೆಂದು ಇಂಡಿಯಾ ಸರಕಾರದವರಲ್ಲಿ ಒಪ್ಪಂದ ಮಾಕೊಂಡಿದ್ದಾರೆ, ಆದರಂತೆ ಇಲ್ಲಿಗೂ ಬರುವುದರಲ್ಲಿದ್ದಾರೆ.

Procurement of marketable surplus of foodgrains

*Q.—104. Sri V. S. LAKSHMIKANTHAPPA (Sagar).—

Will the Government be pleased to state.—

(*a*) whether they intend to procure the entire quantity of marketable surplus of foodgrains that comes under the Foodgrains Declaration Order, 1964;

(*b*) whether they have taken necessary steps to protect the interest of the grower to sell his surplus stock at reasonable prices as and when he desires?

A.—Sri M. V. KRISHNAPPA (Minister for Revenue).—

(*a*) No.
(*b*) Yes.

ಶ್ರೀ ವಿ. ಎಸ್. ಲಕ್ಷ್ಮಿಕಾಂತಪ್ಪ.—ಹಿಂದೆ ಕಂಟ್ರೋಲ್ ಇದ್ದ ಕಾಲದಲ್ಲಿ ಹಾಗೂ ಪ್ರಿ ಇಂಡಿಪೆಂಡೆನ್ಸ್ 1958—59ರ ಸ್ಕೀಮಿನಲ್ಲಿ ಭತ್ತದ ದರಗಳನ್ನು ನಿಗದಿ ಮಾಡುವಾಗ ದಬ್ಬಣಸಾಲ ಬತ್ತಕ್ಕೆ ಒಂದು ದರ, ಶಿವಮೊಗ್ಗದ ಬತ್ತಕ್ಕಾಗಿ ಒಂದು ದರ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಭತ್ತಕ್ಕೆ ನಿಗದಿ ಮಾಡಿರುವ ದರ ಬಹಳ ಕಡಿಮೆಯಾಗಿದೆ. ಇದರಿಂದಾಗಿ ಬೆಳೆಯುವವರಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಈ ಬಗ್ಗೆ ಭತ್ತ ಬೆಳೆಯುವವರಿಗೆ ಹೆಚ್ಚು ಬೆಲೆ ಸಿಗುವಂತೆ ಸರಕಾರ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—1958ನೇ ಇಸವಿಯಲ್ಲಿ ಅಲ್ಲಿ ಬೆಳೆಯುತ್ತಿದ್ದ ದಬ್ಬಣ ಸಾಲಾ ಭತ್ತಕ್ಕೆ 6 ರೂಪಾಯಿಗಳಿತ್ತು. ಅದನ್ನು ಈಗ ಬೆಲೆ ನಿಗದಿ ಮಾಡುವಾಗ 20 ರೂಪಾಯಿಗಳು ಒಂದು ಪಲ್ಲ ದಬ್ಬಣಸಾಲಾ ಭತ್ತಕ್ಕೆ ಎಂದು ನಿಗದಿ ಮಾಡಿದ್ದುದನ್ನು ಈಗ ಪುನಃ ಪ್ರೊಕ್ಯೂರ್‌ಮೆಂಟು ಆರ್ಡರ್ ಮಾಡುವಾಗ 30 ರೂಪಾಯಿಗಳು ಒಂದು ಪಲ್ಲಕ್ಕೆ ಇರಬೇಕೆಂದು ಮಾಡಲಾಗಿದೆ, ಇದನ್ನೂ ಕಡಿಮೆ ಎಂದು ಮಾನ್ಯ ಸದಸ್ಯರು ಈಗ ಹೇಳುವುದಾದರೆ ಅಂತಹವರನ್ನು ಜನಗಳೇ ನೋಡಿಕೊಳ್ಳಬೇಕು.

ಶ್ರೀ ವಿ. ಎಸ್. ಲಕ್ಷ್ಮಿಕಾಂತಪ್ಪ.—ದಬ್ಬಣಸಾಲಾ ಭತ್ತಕ್ಕೆ 20 ರೂಪಾಯಿಗಳಿಂದ 30 ರೂಪಾಯಿಗಳಷ್ಟು ಎಂದು ಮಾಡಿದ್ದರೂ ಕೂಡ ಭತ್ತ ಬೆಳೆಯುವವರಿಗೆ ಹೇಗಾಗಿದೆ ಎಂದರೆ ದಬ್ಬಣ ಸಾಲಾಕ್ಕೂ ಒಂದೇ ದರ, ಶಿವಮೊಗ್ಗದ ಮೀಡಿಯಾದು ಗಿದ್ದು ಎನ್ನುವ ಭತ್ತದ ದರಕ್ಕೂ ಒಂದೇ ದರ ಮಾಡಬೇ 7—8 ರೂಪಾಯಿಗಳಷ್ಟು ವ್ಯತ್ಯಾಸಗಳಿವೆ. ಇದನ್ನು ಸರಿಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಣ್ಣ ಭತ್ತಕ್ಕೂ ತಮ್ಮ ಕಡೆ ಇರುವ ಭತ್ತಕ್ಕೂ 7—8 ರೂಪಾಯಿಗಳಷ್ಟು ವ್ಯತ್ಯಾಸ ಇಟ್ಟಿದ್ದೇವೆ. 1958-59 ರಲ್ಲಿ ಕಂಟ್ರೋಲು ಇದ್ದಾಗಲೂ ಕೂಡ ಇಷ್ಟು ರೇಟು ಇರಲಿಲ್ಲ, ಎಂದು ಹೇಳಿದರೆ ನಾವೇನು ಹೇಳುವುದು? ಯಾವಾಗಲೂ ಭತ್ತದಲ್ಲಿ ನಾನಾ ವೆರೈಟಿಗಳಿರುತ್ತವೆ. ಅದನ್ನು ನೋಡಿಕೊಂಡು ದರಗಳನ್ನು ನಿಗದಿ ಮಾಡುತ್ತಾರೆ. ನಿಮ್ಮ ಕಡೆ ಬರುವ ದಬ್ಬಣಸಾಲಾ ಭತ್ತವನ್ನು ಸ್ಟ್ಯಾಂಡರ್ಡ್ ಕೋರ್ಸ್ ವೆರೈಟಿ ಎಂದು ಮಾಡಲಾಗಿದೆ. ಅದಕ್ಕಿಂತ ಸಣ್ಣ ಭತ್ತದ ಬೆರೆ ಸ್ವಲ್ಪ ಜಾಸ್ತಿಯಾಗಿ ಇಡಲಾಗಿದೆ. ಇದಕ್ಕಿಂತ ಹೆಚ್ಚಿಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ದಪ್ಪ ಭತ್ತ ಎಂದು ಶಿವಮೊಗ್ಗ ಜಿಲ್ಲೆಯಲ್ಲಿ ಬಹುದಿವಸಗಳಿಂದ ಬೆಳೆಯುತ್ತಿದ್ದುದನ್ನು ವ್ಯವಸಾಯ ಇಲಾಖೆಯವರು ಕ್ರಾಸ್ ಬ್ರೀಡ್ ಮಾಡಿ ಈಗ ಉತ್ತಮ ದರ್ಜೆ ಭತ್ತವೆಂದು ಬೆಳೆಯುತ್ತಿದ್ದಾರೆ. ಅದೇ ಭತ್ತ ಮುಂಗಾರಿನಲ್ಲಿ ಹಾಗೂ ಧಾರವಾಡ ಜಿಲ್ಲೆಯಲ್ಲಿ